**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:25-08-2015ರ ನಡವಳಿಗಳು**

**ವಿಷಯದ ಸಂಖ್ಯೆ : 170 / 2015-16**

ವಿಷಯ: ಪಾಲಿಕೆ ವ್ಯಾಪ್ತಿಯಲ್ಲಿ 250 ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಪಿ.ಪಿ.ಪಿ. ಮಾದರಿಯಲ್ಲಿ BOT ಆಧಾರದ ಮೇಲೆ 20 ವರ್ಷಗಳ ಜಾಹೀರಾತು ಗುತ್ತಿಗೆ ಅವಧಿಯೊಂದಿಗೆ ಟೆಂಡರ್ ಆಹ್ವಾನಿಸಲು ಹಾಗೂ ಹೆಚ್ಚಾಗಿ ಜನನಿಬಿಡವಿರುವ ಸ್ಥಳಗಳಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸುಮಾರು 800 ಚ.ಕಿ.ಮೀ. ವಿಸ್ತೀರ್ಣವಿದ್ದು, ಜನಸಂಖ್ಯೆಯು ಒಂದು ಕೋಟಿಗೂ ಹೆಚ್ಚಿದ್ದು ಮತ್ತು ಪ್ರತಿ ದಿನ ಬಂದು ಹೋಗುವವವರ ಸಂಖ್ಯೆ ಶೇ.20.00 ರಷ್ಟು ಆಗಿದೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಪಾಲಿಕೆ ವ್ಯಾಪ್ತಿಯಲ್ಲಿ ತುರ್ತಾಗಿ ಸಾರ್ವಜನಿಕ - ಖಾಸಗಿ ಪಿ.ಪಿ.ಪಿ. ಅಡಿಯಲ್ಲಿ 250 ಸ್ಥಳಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅದಕ್ಕೆ ಅನುಗುಣವಾಗಿ, ಪಾಲಿಕೆಯು ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳನ್ನು ತಪಾಸಣೆ ಮಾಡಿ 250 ಶೌಚಾಲಯ ಸಂಕೀರ್ಣಗಳಿಗೆ ವಿವಿಧ ಪ್ರದೇಶಗಳಲ್ಲಿ ಸ್ಥಳ ಗುರುತಿಸಲಾಗಿರುತ್ತದೆ. ಈ ಸಂಬಂಧ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಲಯಗಳಲ್ಲಿ ತಪಾಸಣೆ ಮಾಡಿರುವ ವರದಿಯ ಆಧಾರದ ಮೇಲೆ ಹೊಸದಾಗಿ ನಿರ್ಮಿಸಬೇಕಾಗಿರುವ 250 ಶೌಚಾಲಯಗಳ ಸ್ಥಳಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ವಲಯದ ಹೆಸರು | ಒಟ್ಟು ವಾರ್ಡ್‌ಗಳು | ಹೊಸದಾಗಿ ನಿರ್ಮಿಸಬೇಕಾಗಿರುವ ಶೌಚಾಲಯಗಳ ಸ್ಥಳದ ಸಂಖ್ಯೆಗಳು |
|---|---|---|---|
| 1 | ಯಲಹಂಕ | 11 | 08 |
| 2 | ದಾಸರಹಳ್ಳಿ | 08 | 06 |
| 3 | ರಾಜರಾಜೇಶ್ವರಿನಗರ | 14 | 24 |
| 4 | ಪೂರ್ವ | 44 | 27 |
| 5 | ಮಹದೇವಪುರ | 17 | 33 |
| 6 | ಪಶ್ಚಿಮ | 44 | 41 |
| 7 | ದಕ್ಷಿಣ | 44 | 53 |
| 8 | ಬೊಮ್ಮನಹಳ್ಳಿ | 16 | 29 |
| 9 | ಹೆಚ್ಚುವರಿ ಜನನಿಬಿಡ ಪ್ರದೇಶಗಳಲ್ಲಿ | ಪಾಲಿಕೆಯ ವ್ಯಾಪ್ತಿಯಲ್ಲಿ | 29 |
| **ಒಟ್ಟು** | | **198** | **250** |

....................2

ಮೇಲ್ಕಾಣಿಸಿದ ಈ ಎಲ್ಲಾ 250 ಸ್ಥಳಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ತುರ್ತಾಗಿ ಪರಿಸರ ಸ್ನೇಹಿ ಶೌಚಾಲಯಗಳನ್ನು ನಿರ್ಮಿಸಲು ಯೋಚಿಸಲಾಗಿದೆ. ಈ ಮೇಲಿನ ಶೌಚಾಲಯಗಳನ್ನು ಪಾಲಿಕೆಯ ಪಿ.ಪಿ.ಪಿ. ಮಾದರಿಯಲ್ಲಿ ಬಿ.ಒ.ಟಿ. ಆಧಾರದ ಮೇಲೆ 20 ವರ್ಷಗಳ ಜಾಹೀರಾತು ಗುತ್ತಿಗೆಯೊಂದಿಗೆ ಅಳವಡಿಸಲು, ಕಾಮಗಾರಿಯನ್ನು ಟೆಂಡರ್ ಮುಖೇನ ಕೈಗೆತ್ತಿಕೊಳ್ಳಲು ನಿರ್ಧರಿಸಲಾಗಿದೆ. ಟೆಂಡರ್‌ನಲ್ಲಿ ಅತೀ ಹೆಚ್ಚು ನೆಲ ಬಾಡಿಗೆ ನಮೂದಿಸುವ ಏಜೆನ್ಸಿಯನ್ನು ಪರಿಗಣಿಸಿ, ಪಾಲಿಕೆಯ ನಿಗಧಿತ ಜಾಹೀರಾತು ದರಗಳನ್ನು ಪಾವತಿಸುವ ಕರಾರು ವಿಧಿಸಲಾಗುವುದು. ಟೆಂಡರ್‌ನಲ್ಲಿ ಆಯ್ಕೆಯಾದ ಏಜೆನ್ಸಿಯು ಕಾರ್ಯಾದೇಶ ನೀಡಲ್ಪಟ್ಟ 1 ವರ್ಷಗಳ ಅವಧಿಯಲ್ಲಿ ವಹಿಸಲಾದ ಎಲ್ಲಾ ಶೌಚಾಲಯಗಳನ್ನು ಪೂರ್ಣಗೊಳಿಸಬೇಕಾಗಿದ್ದು, ಪೂರ್ಣಗೊಂಡ ದಿನದಿಂದ ಜಾಹೀರಾತು ಗುತ್ತಿಗೆ ಅವಧಿ ಇರುವವರೆಗೂ ನಿರಂತರವಾಗಿ ಸುವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕಿರುತ್ತದೆ. ಮುಂದುವರೆದು, ಸರ್ಕಾರದ ಆದೇಶದ ಸಂಖ್ಯೆ:ನಅಇ 718 ಎಂಎನ್‌ಯು 2014, ದಿನಾಂಕ:13-03-2015ರ ಪ್ರಕಾರ ಹೇಳಿರುವ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19-08-2015ರ ಟಿಪ್ಪಣಿ.

1. ಒಟ್ಟು 250 ಸ್ಥಳಗಳನ್ನು ಗುರುತಿಸಿ, ನಿಯಮಗಳು ಮತ್ತು ಷರತ್ತುಗಳ ನಿಬಂಧನೆಗಳೊಂದಿಗೆ ಪಿ.ಪಿ.ಪಿ. ಮಾದರಿಯಲ್ಲಿ ಬಿ.ಒ.ಟಿ. ಆಧಾರದ ಮೇಲೆ 20 ವರ್ಷಗಳ ಜಾಹೀರಾತು ಗುತ್ತಿಗೆ ಅವಧಿಯೊಂದಿಗೆ ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಲು.
2. ಘನ ಸರ್ಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲು ಅನುಮೋದನೆ.
3. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಜನನಿಬಿಡ ಪ್ರದೇಶಗಳನ್ನು- ಬಸ್ ನಿಲ್ದಾಣಗಳು, ಮಾರುಕಟ್ಟೆಗಳು, ರೈಲ್ವೆ ನಿಲ್ದಾಣದ ಸುತ್ತಮುತ್ತಲು, ಪ್ರಮುಖ ರಸ್ತೆಗಳಲ್ಲಿ ಹಮ್ಮಿಕೊಂಡಿರುವ ಅಂಗಡಿ ಬೀದಿಗಳು ಇತ್ಯಾದಿ, ಗುರುತಿಸಿಕೊಂಡು ಈ ಪ್ರದೇಶಗಳಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸಲು ಅನುಮೋದನೆ.
4. ಪಾಲಿಕೆಯ ವ್ಯಾಪ್ತಿಯಲ್ಲಿ ಜನನಿಬಿಡ ಪ್ರದೇಶಗಳಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಾಣ ಮಾಡಿದ ನಂತರ ಈ ಶೌಚಾಲಯಗಳ ನಿರ್ವಹಣೆ ಕಾರ್ಯಗಳನ್ನು ಪಾಲಿಕೆಯ ಪೌರಕಾರ್ಮಿಕರಿಂದ ನಿರ್ವಹಿಸುವುದು ಹಾಗೂ ಅಗತ್ಯವಿರುವ ಸಾಮಾಗ್ರಿಗಳನ್ನು ಸಂಬಂಧ ವಿಭಾಗದಿಂದ ನಿಯಮಾನುಸಾರವಾಗಿ ಟೆಂಡರ್ ಆಹ್ವಾನಿಸಿ ಕ್ರಮಕೈಗೊಳ್ಳಲು ಅನುಮೋದನೆ.
5. ಪಾಲಿಕೆಯ ವ್ಯಾಪ್ತಿಯಲ್ಲಿ ಸಮುದಾಯ ಶೌಚಾಲಯಗಳಿಗೆ ಪಿ.ಪಿ.ಪಿ. ಅಡಿ ಆಸಕ್ತದಾರರು ಬಾರದಿರುವುದರಿಂದ ನಗರೋತ್ಥಾನ ಯೋಜನೆ ಅಡಿಯಲ್ಲಿ ಕೊಳಚೆ ಪ್ರದೇಶಗಳಲ್ಲಿ ನಿರ್ಮಾಣ ಮಾಡಿ ಐದು ವರ್ಷಗಳವರೆಗೆ ನಿರ್ವಹಣೆ ಮಾಡುವ ಸಂಬಂಧ ಟೆಂಡರ್ ಕರೆಯಲು ಅನುಮೋದನೆ.
6. ಪಾಲಿಕೆಯ ವ್ಯಾಪ್ತಿಯಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸಿದ ನಂತರ ಮೂತ್ರ ವಿಸರ್ಜನೆ ಮತ್ತು ಮಲ ವಿಸರ್ಜನೆ ಕಾರ್ಯಗಳಿಗೆ ಉಚಿತ ಸೌಲಭ್ಯವನ್ನು ನೀಡಲು ಅನುಮೋದನೆ.

<u>ತೀರ್ಮಾನ</u>: **"ಕ್ರ.ಸಂ.1 ಹಾಗೂ 2ರ ಬಗ್ಗೆ P.P.P. ಆಧಾರದ ಶೌಚಾಲಯಗಳಿಗೆ ಸರ್ಕಾರದ ಅನುಮೋದನೆ ಪಡೆದ ನಂತರ ಟೆಂಡರ್ ಆಹ್ವಾನಿಸುವ ಷರತ್ತಿನ ಮೇಲೆ ಪ್ರಸ್ತಾವನೆಯನ್ನು ಅನುಮೋದಿಸಿದೆ. ಕ್ರ.ಸಂ.3 ರಿಂದ 6 ಅನ್ನು ಅನುಮೋದಿಸಿದೆ. ಹೊಸ ಸಮುದಾಯ ಶೌಚಾಲಯಗಳಿಗೆ ನಗರೋತ್ಥಾನ ಯೋಜನೆಯಡಿ ಸರ್ಕಾರದ ಅನುಮೋದನೆ ಪಡೆದು ನಿರ್ಮಿಸುವುದು. ಹಾಲಿ ಇರುವ ಸಮುದಾಯ ಶೌಚಾಲಯಗಳ ನಿರ್ವಹಣೆಗಾಗಿ ಕಂಡಿಕೆ-4 ರಂತೆ ಹಾಗೂ ಕಂ.ಡಿಕೆ-6 ರಂತೆ ಕ್ರಮ ಜರುಗಿಸುವುದು. ಇದರಂತೆ ಅನುಮೋದಿಸಿದೆ.**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:27-08-2015 ರ ನಡವಳಿಗಳು

### ವಿಷಯದ ಸಂಖ್ಯೆ : 153 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಇರುವ ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ತಿದ್ದುಪಡಿ ಮಾಡುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರಸ್ತುತ ಈ ಕೆಳಕಂಡಂತೆ ಕಿರಿಯ ಆರೋಗ್ಯ ಪರಿವೀಕ್ಷಕರುಗಳನ್ನು ನೇಮಕಾತಿ ಮಾಡಿಕೊಳ್ಳು ಅವಕಾಶ ಕಲ್ಪಿಸಲಾಗಿದೆ.

| ತುಂಬುವ ವಿಧಾನ | ಅರ್ಹತೆ / ವಿದ್ಯಾರ್ಹತೆ |
|---|---|
| ಶೇ.20 ರಷ್ಟು ನೇರ ನೇಮಕಾತಿ ಮೂಲಕ<br>ಶೇ.20 ರಷ್ಟು ಉಪ ನೊಂದಣಿಗಾರ / ದೇವಿ ಹಾಕುವವರ ಹುದ್ದೆಯ ಮುಂಬಡ್ತಿ ಮೂಲಕ<br>ಶೇ.20 ರಷ್ಟು 4ನೇ ದರ್ಜೆ ನೌಕರರ ವೃಂದದಿಂದ ಮುಂಬಡ್ತಿ ಮೂಲಕ<br>ಶೇ.40 ರಷ್ಟು ಹುದ್ದೆಗಳನ್ನು ಪೌರಕಾರ್ಮಿಕರ ವೃಂದದಿಂದ ಮುಂಬಡ್ತಿ ಮೂಲಕ | ಎಸ್.ಎಸ್.ಎಲ್.ಸಿ.<br>ಸ್ಯಾನಿಟರಿ ಇನ್ಸ್‌ಪೆಕ್ಟರ್ ಡಿಪ್ಲೋಮೋ ಪರೀಕ್ಷೆ<br>**ಇಲಾಖಾ ಪರೀಕ್ಷೆಗಳು**<br>ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಅಕೌಂಟ್ಸ್ ಹೈಯರ್ ಮತ್ತು<br>ಕನ್ನಡ ಭಾಷಾ ಪರೀಕ್ಷೆ ಉತ್ತೀರ್ಣ/ವಿನಾಯಿತಿ |

ಪ್ರಸ್ತುತ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಶೇ.20% ರಷ್ಟು ಹುದ್ದೆಗಳನ್ನು ಅಂದರೆ 89 ಕಿರಿಯ ಆರೋಗ್ಯ ಪರಿವೀಕ್ಷಕರುಗಳನ್ನು 2008 ರಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿದ್ದು, ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ನೇರ ನೇಮಕಾತಿ ಕೋಟಾ ಪೂರ್ಣಗೊಂಡಿರುತ್ತದೆ.

ದಿನಾಂಕ:13-12-2013 ಮತ್ತು 06-01-2014ರ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು 1978ರ ನಿಯಮ 4 ರಲ್ಲಿ 'ಪ್ರೌಢ ಶಿಕ್ಷಣ ತತ್ಸಮಾನ ವಿದ್ಯಾರ್ಹತೆ' ಬದಲಾಗಿ ಪದವಿ ಪೂರ್ವ ಶಿಕ್ಷಣ ಪರೀಕ್ಷೆ ಅಥವಾ ಇದರ ತತ್ಸಮಾನ ವಿದ್ಯಾರ್ಹತೆ ಎಂದು ಪ್ರತಿಸ್ಥಾಪಿಸತಕ್ಕದ್ದು ಎಂದು ತಿದ್ದುಪಡಿ ಮಾಡಲಾಗಿರುತ್ತದೆ. ಈ ಸಂಬಂಧ ಪಾಲಿಕೆ ವತಿಯಿಂದ ದಿನಾಂಕ:30-07-2014 ರಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಇದರಿಂದ, ಇನ್ನು ಮುಂದೆ ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳಿಗೂ ಎಸ್.ಎಸ್.ಎಲ್.ಸಿ. ಬದಲು ಪದವಿ ಪೂರ್ವ ಶಿಕ್ಷಣ ಪಡೆದವರಿಗೆ ಮುಂಬಡ್ತಿಗೆ ಪರಿಗಣಿಸಬೇಕಾಗುತ್ತದೆ.

ಪಾಲಿಕೆಯಲ್ಲಿ 282 ಕಿರಿಯ ಆರೋಗ್ಯ ಪರಿವೀಕ್ಷಕರುಗಳು ಮಂಜೂರಾತಿ ಹುದ್ದೆಗಳಿದ್ದು, ಇವುಗಳಲ್ಲಿ 117 ಮಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, 165 ಹುದ್ದೆಗಳು ಖಾಲಿ ಇರುತ್ತವೆ. ಪ್ರಸ್ತುತ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಂತೆ ಖಾಲಿಯಿರುವ ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಪಾಲಿಕೆಯ ಅರ್ಹ ನಾಲ್ಕನೇ ದರ್ಜೆ ನೌಕರರು, ಪೌರಕಾರ್ಮಿಕರುಗಳು, ಸ್ಯಾನಿಟರಿ ದಫೇದಾರ್‌ಗಳಲ್ಲಿ ಯಾರು ಅರ್ಹರಿಲ್ಲದಿರುವುದರಿಂದ ಮುಂಬಡ್ತಿ ಹುದ್ದೆಗಳು ಖಾಲಿ ಇರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಹಿತದೃಷ್ಟಿಯಿಂದ ಕಿರಿಯ ಆರೋಗ್ಯ ಪರಿವೀಕ್ಷಕರ ಹುದ್ದೆಗಳು ತುಂಬುವುದು ಅತ್ಯವಶ್ಯಕವಾಗಿರುತ್ತದೆ.

.............................2

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರಸ್ತುತ ಇರುವ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28–07–2015ರ ಟಿಪ್ಪಣಿ.

| **ತುಂಬುವ ವಿಧಾನ** | **ಅರ್ಹತೆ / ವಿದ್ಯಾರ್ಹತೆ** |
|---|---|
| ಶೇ.50 ರಷ್ಟು ನೇರ ನೇಮಕಾತಿ ಮೂಲಕ<br>ಶೇ.10 4ನೇ ದರ್ಜೆ ನೌಕರರ ವೃಂದದಿಂದ ಮುಂಬಡ್ತಿ ಮೂಲಕ<br>ಶೇ.40 ರಷ್ಟು ಹುದ್ದೆಗಳನ್ನು ಪೌರಕಾರ್ಮಿಕರ ವೃಂದದಿಂದ ಮುಂಬಡ್ತಿ ಮೂಲಕ | ಪಿ.ಯು.ಸಿ. / ತತ್ಸಮಾನ ವಿದ್ಯಾರ್ಹತೆ<br>ಸ್ಯಾನಿಟರಿ ಇನ್ಸ್‌ಪೆಕ್ಟರ್ ಡಿಪ್ಲೋಮೋ ಪರೀಕ್ಷೆ<br>**ಇಲಾಖಾ ಪರೀಕ್ಷೆಗಳು**<br>ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಅಕೌಂಟ್ಸ್ ಹೈಯರ್ ಮತ್ತು<br>ಕನ್ನಡ ಭಾಷಾ ಪರೀಕ್ಷೆ ಉತ್ತೀರ್ಣ/ವಿನಾಯಿತಿ |

**ತೀರ್ಮಾನ: "ಅನುಮೋದಿಸಿದೆ".**

**(ಟಿ.ಎಂ.ವಿಜಯಭಾಸ್ಕರ್)**
ಆಡಳಿತಗಾರರು